CELEBRATING 40 YEARS IN EYE CARE

NARAYANA NETHRALAYA

your faith shall heal you



# ಥೈರಾಯ್ಡ್


## ಕಣ್ಣಿನ ಕಾಯಿಲೆ

THE BEST EYE HOSPITAL IN KARNATAKA

RANKED #1 FOR MORE THAN A DECADE

## ಥೈರಾಯ್ಡ್ ಗ್ರಂಥಿ ಎಂದರೇನು?

ಕುತ್ತಿಗೆ ಮುಂದಿನ ಭಾಗದಲ್ಲಿರುವ ಶ್ವಾಸನಾಳದ ಮೇಲೆ ಚಿಟ್ಟೆಯಂತಿರುವ ಒಂದು ಗ್ರಂಥಿಗೆ ಥೈರಾಯ್ಡ್ ಗ್ರಂಥಿ ಎಂದು ಕರೆಯುತ್ತೇವೆ. ಈ ಗ್ರಂಥಿಯಿಂದ ಹಾರ್ಮೋನ್ ಉತ್ಪತ್ತಿಯಾಗುತ್ತದೆ. ಇದು ಹೆಚ್ಚು ಉತ್ಪತ್ತಿಯಾದರು ಕಷ್ಟ, ಕಡಿಮೆ ಉತ್ಪತ್ತಿಯಾದರು ಕಷ್ಟ. ಈ ಹಾರ್ಮೋನ್ ಉತ್ಪನ್ನವು ಸ್ವಯಂ ರೋಗ ನಿರೋಧಕ (Auto immune) ಶಕ್ತಿಯ ಆಧಾರದ ಮೇಲೆ ಅವಲಂಬಿತವಾಗಿರುತ್ತದೆ.




## ಥೈರಾಯ್ಡ್‌ನಿಂದ ಬರುವ ಕಣ್ಣಿನ ಕಾಯಿಲೆ ಎಂದರೇನು?

ಥೈರಾಯ್ಡ್‌ನಿಂದ ಕಣ್ಣಿಗೆ ಬರುವ ತೊಂದರೆಗೆ ಥೈರಾಯ್ಡ್ ಕಣ್ಣಿನ ಕಾಯಿಲೆ ಎಂದು ಕರೆಯುತ್ತೇವೆ. ಇದನ್ನು ಹಲವಾರು ಹೆಸರುಗಳಿಂದ ಕರೆಯುತ್ತೇವೆ. ಅವುಗಳೆಂದರೆ ಥೈರಾಯ್ಡ್ ಆಫ್ತಾಲ್‌ಮೊಪತಿ ಡಿಸ್ ಥೈರಾಯ್ಡ್ ಐಡಿಸಿಸ್, ಗ್ರೇವ್ಸ್ ಆಫ್ತಾಲ್‌ಮೊಪತಿ ಅಥವಾ ಆಫ್ತಾಲ್‌ಮಿಕ್ ಗ್ರೇವ್ಸ್ ಡಿಸಿಸ್. ಕಣ್ಣಿನ ಸುತ್ತ ಇರುವ ಸ್ನಾಯುಗಳು ಮತ್ತು ಕೊಬ್ಬಿನಾಂಶಗಳೆರಡೂ ಸಹ ಥೈರಾಯ್ಡ್‌ನಿಂದಾಗಿ ಉಬ್ಬುತ್ತವೆ. ಇದರಿಂದಾಗಿ ಕಣ್ಣಿನ ಗುಡ್ಡೆಯು ದಪ್ಪವಾಗಿ ಮುಂದೆ ಬಂದಂತೆ ಕಾಣುತ್ತದೆ.

ಕಣ್ಣಿನ ಗುಡ್ಡೆಯು ಮುಂದೆ ಬಂದಿರುವುದರಿಂದಾಗಿ ನಮಗೆ ದೃಷ್ಟಿ ಎರೆಡೆರಡಾಗಿ (Double Vision) ಕಾಣುತ್ತದೆ. ಹಾಗೂ ಕೆಲವು ತೀವ್ರ ಸಂಗತಿಗಳಲ್ಲಿ ಕಣ್ಣಿನಿಂದ ಮೆದುಳಿಗೆ ಇರುವ ನರದ ಮೇಲೆ ಒತ್ತಡ ಹೆಚ್ಚಾಗಿ ದೃಷ್ಟಿ ಹೋಗಬಹುದು. ಕಣ್ಣುಗುಡ್ಡೆ ತುಂಬಾ ಮುಂದೆ ಬಂದಿರುವುದರಿಂದ ಕಣ್ಣಿನ ಕರಿಗುಡ್ಡೆಗೆ ಹಾನಿ ಉಂಟಾಗಿ ದೃಷ್ಟಿ ಹೋಗಬಹುದು.

## ಥೈರಾಯ್ಡ್‌ನ ಕಣ್ಣಿನ ಕಾಯಿಲೆಗಳು ಯಾರಲ್ಲಿ ಕಂಡು ಬರುತ್ತದೆ?

ಸಾಮಾನ್ಯವಾಗಿ ಈ ಕಾಯಿಲೆ ಗಂಡಸರಿಗಿಂತ ಮಹಿಳೆಯರಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಹಾಗೂ ಮಧ್ಯವಯಸ್ಸಿನವರಲ್ಲಿ ಮತ್ತು ಅಧಿಕ ಧೂಮಪಾನ ಮಾಡುವವರಲ್ಲಿ ಹೆಚ್ಚಾಗಿ ಈ ತೊಂದರೆ ಕಂಡು ಬರುತ್ತದೆ. ಸಾಮಾನ್ಯವಾಗಿ ರೋಗಿಗಳಲ್ಲಿ ಥೈರಾಯ್ಡ್ ಗ್ರಂಥಿ ಅಧಿಕವಾಗಿ ಕೆಲಸ ಮಾಡುತ್ತದೆ. ಮತ್ತು ಕೆಲವರಲ್ಲಿ ಕಣ್ಣಿನ ತೊಂದರೆ ಇದ್ದರೂ ಸಹ ಥೈರಾಯ್ಡ್ ಹಾರ್ಮೋನ್ ಕಮ್ಮಿ ಇರಬಹುದು. ಅಥವಾ ಸಾಮಾನ್ಯವಾಗಿರಬಹುದು.

## ಥೈರಾಯ್ಡ್ ಕಣ್ಣಿನ ರೋಗವನ್ನು ಹೇಗೆ ಗುರುತಿಸಬಹುದು?

ರೋಗಿಗಳಿಗೆ ಮೊದಲೇ ಥೈರಾಯ್ಡ್ ಗ್ರಂಥಿಯ ತೊಂದರೆ ಇದ್ದರೆ, ನಾವು ಅವರ ಕಣ್ಣುಗಳನ್ನು ನೋಡಿದ ತಕ್ಷಣವೇ ನಿರ್ಧರಿಸಬಹುದು.

### 1. ರಕ್ತ ಪರೀಕ್ಷೆ

ಥೈರಾಯ್ಡ್ ರಕ್ತ ಪರೀಕ್ಷೆಯನ್ನು ಮಾಡಿಸುವುದರಿಂದಾಗಿ ಥೈರಾಯ್ಡ್ ಗ್ರಂಥಿಗಳ ಸ್ಥಿತಿಯನ್ನು ತಿಳಿಯಬಹುದು.

### 2. ಸ್ಕ್ಯಾನ್

ಸಿ.ಟಿ. ಸ್ಕ್ಯಾನ್ ಅಥವಾ ಎಂ.ಆರ್.ಐ ಸ್ಕ್ಯಾನ್‌ಗಳನ್ನು ಮಾಡಿಸುವುದರಿಂದಾಗಿ ಕಣ್ಣಿನ ಸುತ್ತಲು ಇರುವ ಸ್ನಾಯುಗಳ ಸ್ಥಿತಿಯನ್ನು ತಿಳಿಯಬಹುದು. ಹಾಗೂ ಅವುಗಳ ಉಬ್ಬುವಿಕೆಯಿಂದಾಗಿ ಕಣ್ಣಿನ ನರದ ಮೇಲಿನ ಒತ್ತಡವನ್ನು ತಿಳಿಯಬಹುದು.

### 3. ಇತರ ಪರೀಕ್ಷೆಗಳು

ಇನ್ನೂ ಕೆಲವು ಸಂಗತಿಗಳಲ್ಲಿ ವಿಷಲ್ ಫೀಲ್ಡ್ಸ್ ಪರೀಕ್ಷೆಯನ್ನು ಮಾಡಿಸುವುದರಿಂದ ಕಣ್ಣಿನ ಸ್ನಾಯುಗಳ ಉಬ್ಬುವಿಕೆಯಿಂದಾಗಿ ಕಣ್ಣಿನ ನರದ ಮೇಲೆ ಎಷ್ಟು ಒತ್ತಡ ಬಿದ್ದಿದೆ ಎಂಬುದನ್ನು ತಿಳಿಯಬಹುದು.

## ಥೈರಾಯ್ಡ್ ಕಣ್ಣಿನ ರೋಗದಿಂದ ಆಗುವ ತೊಂದರೆಗಳೇನು?

- ಕಣ್ಣಿನ ಕರಿಗುಡ್ಡೆಗೆ(Cornea) ಹಾನಿಯಾಗುತ್ತದೆ.
- ಕಣ್ಣಿನ ನರಕ್ಕೆ ತೊಂದರೆಯಾಗಿ ನಮ್ಮ ದೃಷ್ಟಿ ಕಡಿಮೆಯಾಗುತ್ತದೆ. ಹಾಗೂ ಬಣ್ಣವನ್ನು ಸಹ ಗುರುತಿಸಲಾಗುವುದಿಲ್ಲ.
- ಶಾಶ್ವತವಾಗಿ ದೃಷ್ಟಿಯು ಎರೆಡೆರಡಾಗಿ ಕಾಣುವುದು(DoubleVision) ಅಥವಾ ಮೆಳ್ಳೆಗಣ್ಣು ಉಂಟಾಗುವುದು.
- ಕಣ್ಣುಗಳು ವಿಕಾರವಾಗಿ ಕಾಣುತ್ತವೆ.

## ಈ ಥೈರಾಯ್ಡ್ ಕಣ್ಣಿನ ಕಾಯಿಲೆಯ ಗುಣಲಕ್ಷಣಗಳಾವುವು?

- ಕಣ್ಣಿನ ಸುತ್ತ ಇರುವ ಸ್ನಾಯುಗಳು ಮತ್ತು ಕೊಬ್ಬಿನಾಂಶಗಳೆರಡೂ ಸಹ ಥೈರಾಯ್ಡ್‌ನಿಂದಾಗಿ ಉಬ್ಬುತ್ತವೆ. ಇದರಿಂದಾಗಿ ಕಣ್ಣಿನ ಗುಡ್ಡೆಯು ದಪ್ಪವಾಗಿ ಮುಂದೆ ಬಂದಂತೆ ಕಾಣುತ್ತದೆ.

- ಕಣ್ಣಿನ ಗುಡ್ಡೆಯು ಮುಂದೆ ಬಂದಿರುವುದರಿಂದ ಕರಿಗುಡ್ಡೆ (Cornea) ಯನ್ನು ರೆಪ್ಪೆಯಿಂದ ಸರಿಯಾಗಿ ಮುಚ್ಚಲಾಗದೆ ಕೆಂಪಾಗುವಿಕೆ ಮತ್ತು ಉರಿಯುವಿಕೆಯಾಗುತ್ತದೆ. ಹಾಗೂ ಕೆಲವು ತೀವ್ರ ಸಂಗತಿಗಳಲ್ಲಿ ಕರಿಗುಡ್ಡೆಗೆ ಹಾನಿಯಾಗಿ ದೃಷ್ಟಿಯ ನಾಶಕ್ಕೆ ಕಾರಣವಾಗುತ್ತದೆ.

- ಕಣ್ಣೀರು ಉತ್ಪತ್ತಿಯಾಗುವ ಗ್ರಂಥಿಗೆ ತೊಂದರೆಯಾಗುವುದರಿಂದ ನಮಗೆ ಕಣ್ಣುಗಳು ಒಣಗಿದಂತನಿಸುತ್ತದೆ.

- ನಿಮ್ಮ ಕಣ್ಣುಗಳಿಗೆ ನೋವಾಗಬಹುದು.

- ನಿಮ್ಮ ಕಣ್ಣುಗಳು ದಪ್ಪವಾಗಿ ದಿಟ್ಟಿಸಿ ನೋಡುವಂತೆ ಕಾಣಬಹುದು.

- ಕಣ್ಣಿನ ಸ್ನಾಯುಗಳು ಸಹ ದಪ್ಪವಾಗುವುದರಿಂದ ಸರಿಯಾಗಿ ಕೆಲಸ ಮಾಡದೆ ದೃಷ್ಟಿಯು ಎರಡೆರಡಾಗಿ (Double Vision) (Diplopia) ಕಾಣಬಹುದು.

- ಥೈರಾಯ್ಡ್ ತೊಂದರೆ ಹೆಚ್ಚಾದರೆ ದೃಷ್ಟಿಯು ಮಂಜಾಗುತ್ತದೆ ಹಾಗೂ ಬಣ್ಣವನ್ನು ಗುರುತಿಸಲಾಗುವುದಿಲ್ಲ.



## ಥೈರಾಯ್ಡ್ ಕಣ್ಣಿನ ಕಾಯಿಲೆಗೆ ಯಾವ ರೀತಿ ಚಿಕಿತ್ಸೆ ಮಾಡಬಹುದು?

ಮೊದಲು ಥೈರಾಯ್ಡ್ ಕಣ್ಣಿನ ಕಾಯಿಲೆ ಯಾವ ಹಂತದಲ್ಲಿದೆ ಎಂಬುದನ್ನು ಗುರುತಿಸಿ ನಂತರ ಚಿಕಿತ್ಸೆ ನೀಡಲಾಗುತ್ತದೆ.

### ಔಷಧಿಗಳು

- ಮೊದಲ ಹಂತದಲ್ಲಿ ಕೆಲವು ಲುಬ್ರಿಕೆಂಟ್ಸ್ (Lubricants) ಔಷಧಿಗಳನ್ನು ನೀಡಲಾಗುತ್ತದೆ.
- ಕೆಲವು ತೀವ್ರ ಸಂಗತಿಗಳಲ್ಲಿ ವೈದ್ಯರು ಕಣ್ಣಿನ ದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಪರಿಣಾಮಕಾರಿಯಾದ ಸ್ಟೀರಾಯ್ಡ್ಸ್ (Steroids) ಔಷಧಿಗಳನ್ನು ನೀಡುತ್ತಾರೆ.
- ರೋಗವು ಹೆಚ್ಚಾಗುತ್ತಿದ್ದಂತೆ, ನಿಮಗೆ ರೋಗನಿರೋಧಕ ಔಷಧಗಳು ಬೇಕಾಗಬಹುದು. ಈ ಔಷಧಿಗಳು ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸಲು ಸಹಾಯಕಾರಿಯಾಗುತ್ತವೆ.
- ಕೆಲವರಿಗೆ ಒಂದು ವಸ್ತು ಎರೆಡೆರಡಾಗಿ ಕಾಣಿಸಿದರೆ ಅಂತಹ ಸಮಯದಲ್ಲಿ ಒಂದು ಕಣ್ಣಿಗೆ ಪ್ರಿಜಂ ಅಥವಾ ಪ್ಯಾಚ್ ಹಾಕಿ ದೃಷ್ಟಿಯನ್ನು ಮರೆಮಾಚಲಾಗುತ್ತದೆ.

### ಶಸ್ತ್ರಚಿಕಿತ್ಸೆಯ ವಿಧಾನ

- ಕೆಲವು ಸಂಗತಿಗಳಲ್ಲಿ ಕಣ್ಣಿನ ನರದ ಮೇಲೆ ತೀವ್ರ ಒತ್ತಡ ಬಿದ್ದಾಗ ತಕ್ಷಣ ಶಸ್ತ್ರಚಿಕಿತ್ಸೆ ಬೇಕಾಗುತ್ತದೆ.
- ಥೈರಾಯ್ಡ್‌ನಿಂದಾಗಿ ಮುಂದೆ ಬಂದಿರುವ ಕಣ್ಣಿನ ಗುಡ್ಡೆಯನ್ನು ಶಸ್ತ್ರಚಿಕಿತ್ಸೆ ಮೂಲಕ ಸರಿಪಡಿಸಲಾಗುತ್ತದೆ.
- ಶಸ್ತ್ರಚಿಕಿತ್ಸೆಯ ಮೂಲಕ ಎದ್ದು ಕಾಣುವ ಕಣ್ಣಿನ ಗುಡ್ಡೆಯ ಗಾತ್ರವನ್ನು ಕಡಿಮೆಗೊಳಿಸಬಹುದು.
- ಕಣ್ಣಿನ ರೆಪ್ಪೆಗಳಿಗೂ ಸಹ ಶಸ್ತ್ರಚಿಕಿತ್ಸೆ ಮಾಡಿ ಸಾಮಾನ್ಯವಾಗಿ ಕಾಣುವಂತೆ ಮಾಡಬಹುದು. ಸ್ವಲ್ಪ ಸಮಯದ ನಂತರ ಮೆಳ್ಳೆಗಣ್ಣು ಅಥವಾ ಎರೆಡೆರಡಾಗಿ ಕಾಣುವುದನ್ನು ಸಹ ಶಸ್ತ್ರಚಿಕಿತ್ಸೆಯ ಮೂಲಕ ಸರಿಪಡಿಸಬಹುದು.

### ಬೇರೆ ರೀತಿಯ ಚಿಕಿತ್ಸೆಗಳು

ನಿಮಗೆ (Double Vision) ಎರೆಡೆರಡಾಗಿ ಕಾಣುವ ದೃಷ್ಟಿದೋಷ ಇದ್ದರೆ ಕಣ್ಣಿನ ಸುತ್ತ ಇರುವ ಸ್ನಾಯುಗಳನ್ನು ಚಿಕಿತ್ಸೆ ನೀಡುವ ತಜ್ಞ ವೈದ್ಯರ ಹತ್ತಿರ ಚಿಕಿತ್ಸೆ ಪಡೆಯಬೇಕಾಗಬಹುದು.

## ಈ ತೊಂದರೆಯನ್ನು ತಡೆಗಟ್ಟಲು ನೀವು ಏನು ಮಾಡಬಹುದು?

**ಹೌದು, ಇಲ್ಲಿ ಕೆಲವು ಸಲಹೆಗಳಿವೆ:**

- ಧೂಮಪಾನ ನಿಲ್ಲಿಸಬೇಕು.
- ನಿದ್ದೆಮಾಡುವಾಗ ತಲೆಯ ಕೆಳಗೆ ದಿಂಬನ್ನು ಬಳಸಬೇಕು. ಇದರಿಂದಾಗಿ ಕಣ್ಣಿನ ಸುತ್ತ ಇರುವ ಊತ ಕಡಿಮೆಯಾಗುತ್ತದೆ.
- ಬಿಸಿಲು ಅಥವಾ ಬೆಳಕಿನಿಂದ ನಿಮಗೆ ತೊಂದರೆಯಾಗುತ್ತಿದ್ದರೆ ಕಪ್ಪು ಕನ್ನಡಕವನ್ನು ಹಾಕಿಕೊಳ್ಳಬೇಕು.

# ಅಕ್ಯುಲೋಪ್ಲಾಸ್ಟಿ

## ದೂರವಾಣಿ ಸಂಖ್ಯೆ:91–80–66121496

ನಮ್ಮ ವೆಬ್‌ಸೈಟ್ ಅನ್ನು ಭೇಟಿ ಮಾಡಲು
ಇಲ್ಲಿ ಸ್ಕ್ಯಾನ್ ಮಾಡಿ

ನಮ್ಮ ಶೈಕ್ಷಣಿಕ ವಿಡಿಯೋಗಳನ್ನು ವೀಕ್ಷಿಸಲು
ಇಲ್ಲಿ ಸ್ಕ್ಯಾನ್ ಮಾಡಿ


**ಎನ್.ಎನ್–1** #121/ಸಿ, ಕಾರ್ಡ್ ರಸ್ತೆ, ರಾಜಾಜಿನಗರ, 1ನೇ 'ಆರ್' ಬ್ಲಾಕ್
ಬೆಂಗಳೂರು–560010, ಭಾರತ
ನೇಮಕಾತಿಗಳಿಗಾಗಿಟೆಲಿಫೋನ್: +91–80–66121643
ಅಕ್ಯುಲೋಪ್ಲಾಸ್ಟಿ ವಿಭಾಗ+91–0866121398
**Email - infonn1@narayananethralaya.com**

**ಎನ್.ಎನ್–2** ನಾರಾಯಣ ಹೆಲ್ತ್‌ಸಿಟಿ (ನಾರಾಯಣ ಹೃದಯಾಲಯದ ಆವರಣ)
#258/ಎ, ಬೊಮ್ಮಸಂದ್ರ, ಹೊಸೂರು ರಸ್ತೆ,
ಬೆಂಗಳೂರು–560099, ಭಾರತ
ಟೆಲಿಫೋನ್: +91–80–66660655–0658
**Email - infonn2@narayananethralaya.com**

**ಎನ್.ಎನ್–3** #1/1, 1ನೇ ಮುಖ್ಯರಸ್ತೆ, ಡಿಫೆನ್ಸ್ ಕಾಲೋನಿ, 100 ಅಡಿ ರಸ್ತೆ,
ಇಂದಿರಾನಗರ, ಬೆಂಗಳೂರು–560038, ಭಾರತ
ಟೆಲಿಫೋನ್: +91–80–66974000/01/02
**Email - infonn3@narayananethralaya.com**

**ಎನ್.ಎನ್–4** #63, ರಾಯಲ್ ಮೀನಾಕ್ಷಿ ಮಾಲ್ ಪಕ್ಕ, ಬನ್ನೇರುಘಟ್ಟ ರಸ್ತೆ,
ಹುಳಿಮಾವು, ಬೆಂಗಳೂರು–560076, ಭಾರತ
ಟೆಲಿಫೋನ್: 080–66121618–1619, +91–9513522400,
+91–9538822400
**Email - infonn4@narayananethralaya.com**


**Nnethralaya**

www.narayananethralaya.org